**Andolana**

**Date:** Jan 12, 2016 **Page No.** 9

**Edition:** Mysore **Language:** Kannada

# ಸಾಮಾಜಿಕ ವ್ಯವಹಾರಗಳು ತತ್ವಶಾಸ್ತ್ರ ಅಲ್ಲ

## ವಿಚಾರ ಸಂಕಿರಣ ಉದ್ಘಾಟಿಸಿ ಕೆ.ಪಾಲ್‌ಥಾಮಸ್



ಮೈಸೂರು,ಜ.೧೧-ಸಾಮಾಜಿಕ ವ್ಯವಹಾರಗಳನ್ನು ತತ್ವಶಾಸ್ತ್ರ ಎಂದು ಭಾವಿಸಬಾರದು. ಅಲ್ಲದೆ ಸಾಮಾಜಿಕ ಚಟುವಟಿಕೆಗಳು ಖಾಸಗಿ ಸಂಸ್ಥೆಗಳ ಜವಾಬ್ದಾರಿ ಕೂಡ ಅಲ್ಲ ಎಂದು ಇಎಸ್‌ಎಎಫ್ ಮೈಕ್ರೋ ಫೈನಾನ್ಸ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಕೆ.ಪಾಲ್‌ಥಾಮಸ್ ಅಭಿಪ್ರಾಯಪಟ್ಟರು.

ನಗರದ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಮತ್ತು ಡೆವಲಪ್‌ಮೆಂಟ್ ಸಂಸ್ಥೆ ಆಯೋಜಿಸಿದ್ದ 'ಸಣ್ಣ ಸಾಲ ಮತ್ತು ಉದ್ಯಮಶೀಲತೆ' ಕುರಿತ ಅಂತಾರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಐಸಿಐಸಿಐ ಬ್ಯಾಂಕ್‌ನ ಕಾರ್ಯನಿರ್ವಾಹಕ ನಿರ್ದೇಶಕ ಕೆ.ರಾಮ್‌ಕುಮಾರ್ ಮಾತನಾಡಿ, ಯಾವುದೇ ಸಣ್ಣ ಉದ್ದಿಮೆಗಳು ಬೆಳೆಯಬೇಕಾದರೆ ಅವರಿಗೆ ಆರ್ಥಿಕ ನೆರವು ಅತ್ಯಗತ್ಯ ಎಂದು ನುಡಿದರು. ಯುನೈಟೆಡ್ ಸ್ಟೇಟ್ ಆಫ್ ಅಮೆರಿಕಾದ ಟೆಕ್ಸಾಸ್ ಎ ಮತ್ತು ಎಂ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಹಾಗೂ ಎಸ್‌ಡಿಎಂಐ ಎಂಡಿ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮದ ನಂತರ ತಜ್ಞರೊಂದಿಗೆ ವಿದ್ಯಾರ್ಥಿಗಳು ಸಂವಾದ ನಡೆಸುವ ಮೂಲಕ ತಮ್ಮ ಪ್ರಶ್ನೆಗಳಿಗೆ ಉತ್ತರ ಪಡೆದುಕೊಂಡರು.